ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು – 1**

**ಸಂಖ್ಯೆ :** ಸಿಪಿಐ.2/ಪಾದರಕ್ಷೆ(ಶೂ&ಸಾಕ್ಸ್)/6/2017-18 **ದಿನಾಂಕ:** 24.08.2017

**ಜರೂರು**

## ಸುತ್ತೋಲೆ

**ವಿಷಯ :** ಶಾಲೆಗಳಿಗೆ ಪ್ರೋತ್ಸಾಹದಾಯಕ ಅನುದಾನದಡಿಯಲ್ಲಿ ಈಗಾಗಲೇ ಸರಬರಾಜು ಮಾಡಿರುವ ಶೂ, ಸಾಕ್ಸ್ ಅಥವಾ ಸ್ಯಾಂಡಲ್‌ಗಳ ಗುಣಮಟ್ಟದ ಬಗ್ಗೆ ವರದಿ ನೀಡುವ ಕುರಿತು.

ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಶೂ, ಸಾಕ್ಸ್ ಅಥವಾ ಸ್ಯಾಂಡಲ್‌ಗಳ ಖರೀದಿಯ ಪ್ರಕ್ರಿಯೆಯು ಈಗಾಗಲೇ ಮುಕ್ತಾಯಗೊಂಡಿದ್ದು, ಸದರಿ ಶಾಲೆಗಳಲ್ಲಿ ಖರೀದಿಸಿರುವ ಶೂ, ಸಾಕ್ಸ್ ಅಥವಾ ಸ್ಯಾಂಡಲ್‌ಗಳ ಗುಣಮಟ್ಟದ ಬಗ್ಗೆ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಬೇಕಾಗಿದೆ.

ಈ ನಿಟ್ಟಿನಲ್ಲಿ ತಮ್ಮ ಕಛೇರಿಯ ವಿಷಯ ಪರಿವೀಕ್ಷಕರನ್ನು ತಮ್ಮ ಜಿಲ್ಲೆಯಲ್ಲಿನ ಯಾವುದಾದರೂ ಒಂದು ಶಾಲೆಗೆ ಭೇಟಿ ನೀಡಲು ನಿಯೋಜಿಸಿ, ಸದರಿ ಅಧಿಕಾರಿಗಳಿಂದ ಶೂ, ಸಾಕ್ಸ್ ಅಥವಾ ಸ್ಯಾಂಡಲ್‌ಗಳ ಗುಣಮಟ್ಟದ ಬಗ್ಗೆ ಖಾತ್ರಿ ಪಡಿಸಿಕೊಂಡು ಇವುಗಳ ಭಾವಚಿತ್ರವನ್ನು ಪಡೆದು ಒಂದು ಪುಟಕ್ಕೆ ಮೀರದಂತೆ ಶೂ, ಸಾಕ್ಸ್ ಅಥವಾ ಸ್ಯಾಂಡಲ್‌ಗಳು ಎಲ್ಲಾ ವಿದ್ಯಾರ್ಥಿಗಳಿಗೆ ಸರಬರಾಜು ಮಾಡಿರುವ ಹಾಗೂ ಅದರ ಗುಣಮಟ್ಟದ ಬಗ್ಗೆ ವರದಿಯನ್ನು ತಯಾರಿಸಿ ಆ ವರದಿಯೊಂದಿಗೆ ಭಾವಚಿತ್ರವನ್ನು ಲಗತ್ತಿಸಿ ಈ ಕಛೇರಿಗೆ ಕೆಳಕಂಡ ಇ-ಮೇಲ್‌ಗಳ ವಿಳಾಸಕ್ಕೆ ಮುಂಗಡವಾಗಿ **ದಿನಾಂಕ:26-08-2017ರೊಳಗಾಗಿ** ಕಳುಹಿಸಿ ಹಾರ್ಡ್ ಪ್ರತಿಯನ್ನು ಅಂಚೆ ಮೂಲಕ ಕೂಡಲೇ ರವಾನಿಸಲು ತಿಳಿಸಿದೆ.

ಇ-ಮೇಲ್ ವಿಳಾಸಗಳು : 1) primarydpi@gmail.com
2) ps2cpi@gmail.com **or** pstocpi@gmail.com

24/8.

ನಿರ್ದೇಶಕರು.
(ಪ್ರಾಥಮಿಕ ಶಿಕ್ಷಣ)

**ಇವರಿಗೆ**

1. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ.
2. ಮಾನ್ಯ ಆಯುಕ್ತರ ಆಪ್ತ ಕಾರ್ಯದರ್ಶಿಗಳಿಗೆ ಮಾಹಿತಿಗಾಗಿ,
3. ಕಛೇರಿ ಪ್ರತಿ.